ಉದಯವಾಣಿ
ಕನ್ನಡ ದಿನಪತ್ರಿಕೆ

Saturday, January 15th, 2011

# ಜೈನ್ ವಿವಿಯಲ್ಲಿ ಸಾಂಸ್ಕೃತಿಕ ಲಾಸ್ಯ

**ಬೆಂಗಳೂರು:** ಜೈನ್ ವಿವಿಯ ಸೆಂಟರ್ ಫಾರ್ ಮ್ಯಾನೇಜ್‌ಮೆಂಟ್ ಸ್ಟಡೀಸ್‌ನಲ್ಲಿ ಫೆ.1 ರಿಂದ 5ರ ವರೆಗೆ ರಾಷ್ಟ್ರಮಟ್ಟದ ಸಾಂಸ್ಕೃತಿಕ ಸ್ಪರ್ಧೆ, ಕನ್ನಡ ಮತ್ತು ಹಿಂದಿ ನಾಟಕ ಸ್ಪರ್ಧೆಗಳು ನಡೆಯಲಿವೆ.

ಜೈನ್ ಯುನಿವರ್ಸಿಟಿ ಸೆಂಟರ್ ಫಾರ್ ಮ್ಯಾನೇಜ್‌ಮೆಂಟ್ ಸ್ಟಡೀಸ್ ಪ್ರಾಂಶುಪಾಲ ದಿನೇಶ್ ನೀಲಕಂಠ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಕಾರ್ಯಕ್ರಮದ ವಿವರ ನೀಡಿದರು.

ಫೆ. 1ರಂದು ಮ್ಯಾನೇಜ್‌ಮೆಂಟ್ ಸ್ಟಡೀಸ್‌ನ ಮೊದಲ ವರ್ಷದ ವಿದ್ಯಾರ್ಥಿಗಳಿಗೆ ಮ್ಯಾನೇಜ್‌ಮೆಂಟ್ ಫೆಸ್ಟ್ ನಡೆಯಲಿದೆ. ಸ್ಥಳ: ನಿಮ್ಹಾನ್ಸ್ ಕನ್ವೆನ್‌ಷನ್ ಸೆಂಟರ್, ಹೊಸೂರು ರಸ್ತೆ.

ಫೆ.2 ಮತ್ತು 3ರಂದು ಲಾಸ್ಯ ಸಾಂಸ್ಕೃತಿಕ ಹಬ್ಬ. ರಂಗೋಲಿ ಸ್ಪರ್ಧೆ, ಸಂಗೀತ, ನೃತ್ಯ, ಕವನ ಬರೆಯುವುದು.

ಫೆ.4 ಮತ್ತು 5ರಂದು ರಾಷ್ಟ್ರಮಟ್ಟದ ಹಿಂದಿ ಮತ್ತು ಕನ್ನಡ ನಾಟಕ ಸ್ಪರ್ಧೆಗಳು. ಇದಕ್ಕಾಗಿ ಈಗಾಗಲೇ ಮುಂಬೈನಲ್ಲಿ ಅರ್ಹತಾ ಸುತ್ತಿನ ಸ್ಪರ್ಧೆಗಳು ನಡೆದಿವೆ. ಸ್ಥಳ: ಜೆ.ಎಸ್.ಎಸ್. ಸಭಾಂಗಣ, ಜಯನಗರ.

ರಾಷ್ಟ್ರೀಯ ಮಟ್ಟದ ರಸಪ್ರಶ್ನೆ ಸ್ಪರ್ಧೆ ನಡೆಯಲಿದ್ದು ಜ.30ರಂದು ಅರ್ಹತಾ ಸುತ್ತಿನ ಸ್ಪರ್ಧೆಗಳು ನಡೆಯಲಿವೆ. ಸ್ಪರ್ಧೆಯಲ್ಲಿ ಎಲ್ಲಾ ಕಾಲೇಜಿನ ವಿದ್ಯಾರ್ಥಿಗಳೂ ಭಾಗವಹಿಸಲು ಅವಕಾಶವಿದೆ. ಕಾಲೇಜಿನ ಗುರುತಿನ ಪತ್ರ ಮಾತ್ರ ಕಡ್ಡಾಯ. ಉಳಿದಂತೆ ಪ್ರವೇಶ ಉಚಿತ. ಊಟ ವಸತಿ ಎಲ್ಲವೂ ಉಚಿತ. ನಾಟಕ ತಂಡಗಳಿಗೆ ಪ್ರಸಾದನ, ಬೆಳಕಿನ ವ್ಯವಸ್ಥೆ ಎಲ್ಲವನ್ನೂ ಸಂಸ್ಥೆಯೇ ಭರಿಸಲಿದೆ. ಭಾಗವಹಿಸಲಿಚ್ಛಿಸುವ ವಿದ್ಯಾರ್ಥಿಗಳು ಹೆಚ್ಚಿನ ಮಾಹಿತಿಗಾಗಿ 9880616000 ಸಂಖ್ಯೆಗೆ ಸಂಪರ್ಕಿಸಬಹುದು.